ತಾರೀಖು 2ನೇ ಆಗಸ್ಟ್ 1884.

ನಂ. 103—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮೇಲ್‌ಕಂಡ ಇನ್ಸ್ತಿ ಹಾರ್‌ನಾಮೆಯಿಂದ ವರ್ಗಾವರ್ಗಿ ಮಾಡಲ್ಪಟ್ಟ ಗ್ರಾಮಗಳ ತಖ್ತೆಗೆ ಕೇರಬೇಕಾದ ಇದರಡಿ ಕಂಡ ಪಟ್ಟೀಯು ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ:—

ನಂಬರ್.	ಗ್ರಾಮಗಳ ಹೆಸರು.	ವರ್ಗಮಾಡಲ್ಪಟ್ಟದ್ದು.	
		ತಾಲ್ಲೂಕಿನಿಂದ.	ತಾಲ್ಲೂಕಿಗೆ.
1	ತಪಸಿಪುರಾ	ಚಿಕ್ಕಬಳ್ಳಾಪುರದಿಂದ	ದೊಡ್ಡಬಳ್ಳಾಪುರಕ್ಕೆ
2	ಅಚ್ಚಿಯಾರಲಹಳ್ಳಿ		

ತಾರೀಖು 5ನೇ ಆಗಸ್ಟ್ 1884.

ನಂ. 104.—ಲೇಟ್ ಚೀಫ್ ಕಮ್ಮಿಷನರವರ 1871ನೇ ಇಸವಿ ಮೇ 18ನೇ ಮರ್ಕುಮಿನ 69ನೇ ನಂಬರ್ ಇನ್ಸ್ತಿ ಹಾರ್‌ನಾಮೆಯನ್ನು ಬದಲಾಯಿಸಿ ಮತ್ತು ಬೆಂಗಳೂರು ಷಹರ್‌ನಲ್ಲಿ ಮ್ಯುನಿಸಿಪಲ್ ಕೆಲಸಗಳನ್ನು ನಿರ್ವಹಿಸುವಪೇಕ್ಷೋಸ್ತರವಾದ ರೆಗ್ಯೂಲೇಷನಿನ 4ನೇ ಸೆಕ್ಷನ್ ಅನುಸಾರ, ಸೆಂಟ್ರಲ್ ಕಾಲೇಜಿನ ಮುಖ್ಯ ಅಸಿಸ್ಟೆಂಟರು, ಆರಡ್ರ್ಸೆನ ಕಮ್ಮಿಸಾರಿಯವರಿಗೆ ಬದಲಾಗಿ, ಬೆಂಗಳೂರು ಷಹರ್ ಮ್ಯುನಿಸಿಪಲ್ ಬೋರ್ಡಿನ ಯಕ್ಸ ಆಫಿಷಿಯೋ (ಯಾನೆ ವೃದ್ಯೋಗಶಃ) ಮೆಂಬರಾಗಿ ಮೊಕರರ್ ಮಾಡಲ್ಪಟ್ಟರುತ್ತಾರೆ.

ತಾರೀಖು 8ನೇ ಆಗಸ್ಟ್ 1884.

ನಂ. 105.—ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಕನಹಳ್ಳೀ ತಾಲ್ಲೂಕು ಅಮಲ್ದಾರ್ ರಾಮಸ್ವಾಮಯ್ಯನವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತ್ತೆ.

ಹುಳಿಯಾರದ ಡೆಪ್ಯುಟಿ ಅಮಲ್ದಾರ್ ಶ್ರೀನಿವಾಸರಾಯರು, 5ನೇ ಗ್ರೇಡ್ ಆ್ಯಂಗ್ ಅಮಲ್ದಾರರಾಗಿ ಮೊಕರರ್ ಮಾಡಲ್ಪಟ್ಟು, ರಾಮಸ್ವಾಮಯ್ಯನವರ ಗೈರ್ ಹಾಜರೀಯಲ್ಲಿ ಯಾ ವುತ್ತೊಂದು ಹುಕ್ಕುಂ ಕೊಡುವ ಪರಿಯಂತ, ಅವರ ಕೆಲಸದೊಂದಿಗೆ ಚಿಕ್ಕನಾಯಕನ ಹಳ್ಳೀ ತಾಲ್ಲೂಕಿನ ಬಾಬ್ತು ವಹಿಸಿ ಯಿರತಕ್ಕದ್ದು.

ತಾರೀಖು 19ನೇ ಆಗಸ್ಟ್ 1884.

ನಂ. 106.—ಮೈಸೂರು ಮೆಡಿಕಲ್ ಇಲಾಖೆಗೆ ಕೇರಿದ ಅನರೇರಿ ಸರ್ಜನ್ ಮೆ|| ಜೆ. ಸಾಸ್ಮೆರ್ಯವರು, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನರಾಗಿ ಮೊಕರರ್ ಮಾಡಲ್ಪಟ್ಟರುತ್ತಾರೆ.

ತಾರೀಖು 11ನೇ ಆಗಸ್ಟ್ 1884.

ನಂ. 107.—ಶಿವಮೊಗ್ಗಾ ಡಿಸ್ಟ್ರಿಕ್ಟು ಖರ್ಚಿಚಿ ನಾಗೇಶರಾಯರು, ಮತ್ತೊಂದು ಹುಕ್ಕುಂ ಕೊಡುವ ಪರಿಯಂತರ ಶಿವಮೊಗ್ಗಾ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟರುತ್ತಾರೆ.

ಬಮ್ಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.